# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
**ಕಾರ್ಪೊರೇಟ್ ಐಡೆಂಟಿಫಿಕೇಷನ್ ಸಂಖ್ಯೆ:** (CIN) : U40109KA2004SGC035177

ನಿಗಮದ ನೋಂದಾಯಿತ ಕಛೇರಿ ವಿಳಾಸ:
ನಂ.29, 2ನೇ ಮಹಡಿ, ಕಾವೇರಿ ಗ್ರಾಮೀಣ ಬ್ಯಾಂಕ್ ರಸ್ತೆ,
ವಿಜಯನಗರ, 2ನೇ ಹಂತ, ಮೈಸೂರು-570017 ಇಮೇಲ್: www.cescmysore.org

ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರ ಕಛೇರಿ, ಕಾರ್ಯ ಮತ್ತು ಪಾಲನಾ ವಿಭಾಗ, ಸೆಸ್ಕ ಮಡಿಕೇರಿ
ದೂರವಾಣಿ: 08272-224701, 08272-226650
ಫ್ಯಾಕ್ಸ್: 08272-222685
ಇಮೇಲ್: cesceemdk@rediffmail.com
cesceemdk@gmail.com

ಕಾನಿಇಂ(ವಿ)/ಕಾಮತ್ತುಪಾ.ವಿಭಾ/ಮ.ಕೇರಿ /2019-20/ 7700-7706 **ದಿನಾಂಕ:** 03-10-19

## ಸಭೆಯ ನಡಾವಳಿಗಳು

**ದಿನಾಂಕ 26.09.2019 ರಂದು ವಿರಾಜಪೇಟೆ ಉಪವಿಭಾಗ ಕಛೇರಿಯಲ್ಲಿ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರ ಅಧ್ಯಕ್ಷತೆಯಲ್ಲಿ ನಡೆದ ಜನ ಸಂಪರ್ಕ ನಡಾವಳಿಗಳು.**

ಸಭೆಯಲ್ಲಿ ಹಾಜರಿದ್ದವರು:-

1. ಶ್ರೀ.ಬಿ.ಸೋಮಶೇಖರ್ : ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ), ಮಡಿಕೇರಿ ವಿಭಾಗ.
2. ಶ್ರೀ.ಪಿ.ಎಸ್.ಸುರೇಶ್ : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿರಾಜಪೇಟೆ
3. ಶ್ರೀ.ಶಿವನಗೌಡ ಅಯ್ಯನಗೌಡ ಪಾಟೀಲ : ಸಹಾಯಕ ಇಂಜಿನಿಯರ್(ವಿ), ವಿರಾಜಪೇಟೆ
4. ಶ್ರೀ.ಕೆ.ಎಂ.ದಿಲೀಪ್ : ಸಹಾಯಕರು ಇಂಜಿನಿಯರ್(ಕಾಂ), ವಿರಾಜಪೇಟೆ ಉಪವಿಭಾಗ.
5. ಶ್ರೀ.ಹೆಚ್.ಎಸ್.ರಮೇಶ್ : ಕಿರಿಯ ಇಂಜಿನಿಯರ್(ವಿ), ಅಮ್ಮತ್ತಿ ಶಾಖೆ.
6. ಶ್ರೀಮತಿ.ಬಿ.ಜಿ.ಚಂಪಾವತಿ : ಕಿರಿಯ ಇಂಜಿನಿಯರ್(ವಿ), ಸಿದ್ದಾಪುರ ಶಾಖೆ.
7. ಶ್ರೀ.ಸಿ.ಬಿ.ದೇವಯ್ಯ : ಪ್ರಭಾರ ಕಿರಿಯ ಇಂಜಿನಿಯರ್(ವಿ), ಪಾಲಿಬೆಟ್ಟ ಶಾಖೆ.
8. ಶ್ರೀ.ಎಂ.ಎನ್.ಹರೀಶ್ : ಪ್ರಭಾರ ಹಿರಿಯ ಸಹಾಯಕರು, ಕಂದಾಯ ಶಾಖೆ, ವಿರಾಜಪೇಟೆ

| ಕ್ರಮ ಸಂಖ್ಯೆ | ಸಲಹೆ/ದೂರು ಗಳನ್ನು ನೀಡಿದ ಸದಸ್ಯರ ಹೆಸರು ಮತ್ತು ವಿಳಾಸ | ಸಲಹೆ/ದೂರುಗಳ ವಿವರ | ಸಲಹೆ/ ದೂರುಗಳಿಗೆ ಉತ್ತರ |
|---|---|---|---|
| 1 | ಶ್ರೀ.ಎಂ.ಎಸ್.ಸೋಮಯ್ಯ, ಶ್ರೀ.ತಮ್ಮಯ್ಯ, ಎಂ.ಎಸ್.ಪೊನ್ನಪ್ಪ, ಎಂ.ಸಿ.ಕರುಂಬಯ್ಯ, ಎಂ.ಸಿ.ಮುತ್ತಪ್ಪ, ಎಂ.ಸಿ.ಮುದ್ದಯ್ಯ, ಪಿ.ಕುಶಾಲಪ್ಪ, ದಿನೇಶ್, ಸಿ.ಮಾಚಯ್ಯ, ಎ.ಎಂ.ಕಾರ್ಯಪ್ಪ, ಎಂ.ಸಿ.ಚಂಗಪ್ಪ ಹಾಗೂ ಬೈರಂಬಾಡ ಪಾಲಂಗಾಲ ಗ್ರಾಮಸ್ಥರು 9902429414, 9449618185 | * ಅಮ್ಮತ್ತಿ ಶಾಖಾ ವ್ಯಾಪ್ತಿಯ ಬೈರಂಬಾಡ ಹಾಗು ಪಾಲಂಗಾಲದ ಗ್ರಾಮದ ಗ್ರಾಹಕರಿಗೆ ಮಾಪಕ ಓದುವ ಕಾರ್ಯವನ್ನು ವಹಿಸಿಕೊಂಡಿರುವ ಸಂಸ್ಥೆ ವತಿಯಿಂದ ತಮ್ಮ ಸ್ಥಾವರಗಳ ಮಾಸಿಕ ವಿದ್ಯುತ್ ಬಿಲ್‌ಗಳನ್ನು ಪ್ರತೀ ತಿಂಗಳು ನೀಡದೇ ಇರುವುದು, ಮಾಪಕ ಓದುಗರು ಸ್ಥಾವರಗಳ ಮಾಪಕಗಳನ್ನು ಪರಿಶೀಲಿಸದೇ ಬಿಲ್‌ಗಳನ್ನು ತಯಾರಿಸುವುದು, ನಿಗದಿತ ದಿನಾಂಕಗಳಂದು ಮಾಪಕಗಳನ್ನು ಓದದೇ ತಮಗೆ ಇಷ್ಟ ಬಂದ ದಿನ ಮಾಪಕ ಓದಲು ಸ್ಥಾವರಗಳಿಗೆ ತೆರಳಿ ಬಿಲ್‌ಗಳನ್ನು ವಿತರಿಸುವುದು ಸೇರಿದಂತೆ ಗ್ರಾಹಕರಿಗೆ ಮೋಸ ಮಾಡುತ್ತಿರುವುದಾಗಿ ತಿಳಿಸುತ್ತಾ ತಡವಾಗಿ ಅಂದರೆ ಬಿಲ್ ಪಾವತಿಗೆ ಕೊನೆಯ ದಿನಾಂಕದ ನಂತರ ಬಿಲ್ ಗಳನ್ನು ನೀಡಿ ಬಡ್ಡಿ ವಿಧಿಸಲಾಗುತ್ತಿದ್ದು, ಈ ರೀತಿ | * ಇದಕ್ಕೆ ಉತ್ತರಿಸಿದ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಸದರಿ ಬಿಲ್ ವಿತರಣೆಯ ಕಾರ್ಯವನ್ನು ಮೊಬಿಯಸ್ ಇನ್ಫ್ರಾ ಎಂಬ ಕಂಪನಿಗೆ ವಹಿಸಿದ್ದು ಪ್ರತೀ ತಿಂಗಳು ನಿಗದಿಪಡಿಸಿದ ದಿನಾಂಕಗಳಂದೇ ಶೇಕಡ 100 ರಷ್ಟು ಸ್ಥಾವರಗಳ ಮಾಪಕ ಓದಿ ಸ್ಥಳದಲ್ಲಿಯೇ ಬಿಲ್ ನೀಡುವಂತೆ ತಿಳಿಸಲಾಗಿದ್ದರೂ ಸಂಬಂಧಪಟ್ಟ ಮಾಪಕ ಓದುಗರು ಸರಿಯಾಗಿ ಕೆಲಸ ನಿರ್ವಹಿಸದೇ ಇರುವ ಕುರಿತು ಈಗಾಗಲೇ ಹಲವಾರು ಗ್ರಾಹಕರಿಂದ ದೂರುಗಳು ಬರುತ್ತಿದ್ದು, ಸದರಿ ಸಂಸ್ಥೆಗೆ ನೋಟೀಸ್ ಜಾರಿ ಮಾಡಲಾಗಿರುತ್ತದೆ ಹಾಗು ಸರಿಯಾದ ರೀತಿಯಲ್ಲಿ ಕೆಲಸ ನಿರ್ವಹಿಸುವಂತೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ ಹಾಗು ಈ ಬಗ್ಗೆ ಮೇಲಧಿಕಾರಿಗಳ ಗಮನಕ್ಕೆ ತರಲಾಗಿದೆ ಎಂದು ತಿಳಿಸಿದರು. ಗ್ರಾಹಕರಿಗೆ ಮಾಸಿಕ ವಿದ್ಯುತ್ ಬಿಲ್ ಸರಿಯಾಗಿ ವಿತರಣೆಯಾಗದ ಬಗ್ಗೆ ಈಗಾಗಲೇ ಮೇಲಧಿಕಾರಿಗಳ ಗಮನಕ್ಕೆ ತರಲಾಗಿದ್ದು ಮುಂದಿನ ದಿನಗಳಲ್ಲಿ ಪ್ರೀ-ಪೇಯ್ಡ್ ಮೀಟರ್ |

| | | | |
|---|---|---|---|
| | | ವಿಧಿಸಲಾದ ಬಡ್ಡಿಯನ್ನು ಹಿಂಪಡೆಯುವಂತೆ ತಿಳಿಸಿರುತ್ತಾರೆ ಹಾಗೂ ಇನ್ನು ಮುಂದೆ ಪ್ರತೀ ತಿಂಗಳು ನಿಗಧಿತ ದಿನಾಂಕಗಳಂದೇ ಬಿಲ್‌ಗಳನ್ನು ನೀಡುವಂತೆ ಸಂಬಂಧಪಟ್ಟ ಮಾಪಕ ಓದುಗರಿಗೆ ಕಟ್ಟುನಿಟ್ಟಿನ ಆದೇಶ ನೀಡುವಂತೆ ತಿಳಿಸಿರುತ್ತಾರೆ. | ಅಳವಡಿಸುವ ಯೋಜನೆಯು ಪ್ರಸ್ತಾವನೆಯು ಇರುವುದಾಗಿ ತಿಳಿಸುತ್ತಾ ನಿಗಧಿತ ದಿನಾಂಕದೊಳಗೆ ಮಾಪಕ ಓದುಗ ಮಾಸಿಕ ಬಿಲ್ ಒದಗಿಸದೇ ಇರುವ ಪಕ್ಷದಲ್ಲಿ ಈ ಕಛೇರಿಗೆ ಲಿಖಿತ ರೂಪದಲ್ಲಿ ತಿಳಿಸುವಂತೆ ಮತ್ತು ಗ್ರಾಹಕರೇ ಸದರಿ ಗಣಕಾಂಕವನ್ನು ತಂದು ಕಂದಾಯ ಶಾಖೆಯಲ್ಲಿ ಮಾಡಿ ಬಿಲ್ ಪಾವತಿಸುವಂತೆ ಕೋರಿದರು. |
| | | • ಒಟಿಯಂಗಡಿ ಬೈರಂಪಾಡ ಗ್ರಾಮದಲ್ಲಿ ವಿದ್ಯುತ್ ವೋಲ್ಟೇಜ್ ಸಮಸ್ಯೆಯನ್ನು ಶೀಘ್ರ ಬಗೆಹರಿಸುವಂತೆ. | • ಸದರಿ ಗ್ರಾಮದಲ್ಲಿನ ವೋಲ್ಟೇಜ್ ಸಮಸ್ಯೆಯನ್ನು ಪರಿಶೀಲಿಸಿ ಸದರಿ ಗ್ರಾಮಕ್ಕೆ ಹೆಚ್ಚುವರಿ ಪರಿವರ್ತಕವನ್ನು ಅಳವಡಿಸಲು ಕ್ಷೇತ್ರ ಪರಿಶೀಲಿಸಿ ಅಂದಾಜು ಪಟ್ಟಿ ಸಲ್ಲಿಸುವಂತೆ ಅಮ್ಮತ್ತಿ ಶಾಖಾಧಿಕಾರಿಗಳಿಗೆ ಸೂಚಿಸಿದರು. |
| | | • ಹಾಲುಗುಂದಾ ಹಾಗೂ ಬೈರಂಪಾಡ ಗ್ರಾಮದಲ್ಲಿ ಹಲವು ಕಡೆ ವಿದ್ಯುತ್ ತಂತಿಯು ಜೋತು ಬಿದ್ದಿದ್ದು ಆನೆ ಕಾರಿಡಾರ್ ಯೋಜನೆಯಡಿಯಲ್ಲಿ ಕಂಬ ಅಳವಡಿಸದಿರುವ ಬಗ್ಗೆ ಹಾಗೂ ಭೂಗತ ಕೇಬಲ್ ಅಳವಡಿಸುವಂತೆ ಅಳವಡಿಸುವಂತೆ ತಿಳಿಸಿದರು. | • ಆನೆ ಕಾರಿಡಾರ್ ಯೋಜನೆಯನ್ನು ಮೆ॥ಜ್ಯೋತಿ ಎಲೆಕ್ಟ್ರಿಕಲ್ಸ್ ಮಂಗಳೂರು ರವರಿಗೆ ಟೆಂಡರ್ ನೀಡಿದ್ದು ಕಳೆದ ಒಂದೆರಡು ತಿಂಗಳಿನಿಂದ ಮಳೆಯ ಕಾರಣದಿಂದ ಕಾಮಗಾರಿಯು ಮಂದಗತಿಯಲ್ಲಿ ಸಾಗಿದ್ದು [illegible] ಅಪಾಯಕಾರಿ ಸ್ಥಳವಿದ್ದಲ್ಲಿ ಸದರಿ ಮಾರ್ಗವನ್ನು ಕೂಡಲೇ ಪರಿಶೀಲಿಸಿ ನಿಗಮದ ದರಪಟ್ಟಿಯಂತೆ ಕಂಬ ಅಳವಡಿಸುವಂತೆ ಅಮ್ಮತ್ತಿ ಶಾಖಾಧಿಕಾರಿಗಳಿಗೆ ತಿಳಿಸುತ್ತಾ ಸದರಿ ಜಾಗದಲ್ಲಿ ಭೂಗತ ಕೇಬಲ್ ಅಳವಡಿಸುವ ಕಾರ್ಯ ಕಷ್ಟಸಾಧ್ಯ ಎಂದು ತಿಳಿಸಿದರು. |
| | | • ಸದರಿ ಗ್ರಾಮಗಳಲ್ಲಿ ವಿದ್ಯುತ್ ಅಡಚಣೆಯನ್ನು ಬಗೆಹರಿಸುವ ಬಗ್ಗೆ. | • ಸದರಿ ಗ್ರಾಮಗಳಿಗೆ ಪ್ರಸ್ತುತ 11 ಕೆ.ವಿ ಮಾರ್ಗವು 66/33/11 ಕೆ.ವಿ ಮಗ್ಗುಲ ವಿದ್ಯುತ್ ಉಪವಿತರಣ ಕೇಂದ್ರದಿಂದ ಹೊರಹೊಮ್ಮುತ್ತಿದ್ದು, ಮಾರ್ಗವು ಮಗ್ಗುಲ, ಅಮ್ಮತ್ತಿ ಹಾಗೂ ಇತರ ಗ್ರಾಮಗಳ ಮೂಲಕವಾಗಿ ಹಾಲುಗುಂದ ಗ್ರಾಮಕ್ಕೆ ತಲುಪುತ್ತಿದ್ದು ಒಂದೇ ಮಾರ್ಗವಾಗಿರುವುದರಿಂದ ಹಾಗು ಪೂರ್ಣವಾಗಿ ಕಾಫಿ ತೋಟಗಳ ಮಧ್ಯ ಭಾಗಕ್ಕಾಗಿ ಹಾದು ಹೋಗುತ್ತಿದ್ದು ಅಡಚಣೆ ಮಿತಿಗೊಳಿಸುವ ನಿಟ್ಟಿನಲ್ಲಿ ಮಾರ್ಗ ವಿಭಜನೆಯ ಕಾಮಗಾರಿಯು ಮಂಜೂರಾಗಿದ್ದು ಟೆಂಡರ್ ಪ್ರಕ್ರಿಯೆ ಮುಗಿದಿದ್ದು ಸಂಬಂಧಪಟ್ಟ ಗುತ್ತಿಗೆದಾರರಿಗೆ ಸದರಿ ಕಾಮಗಾರಿಯನ್ನು ಮುಂದಿನ ಮೂರು ತಿಂಗಳೊಳಗೆ ಪೂರ್ಣಗೊಳಿಸುವಂತೆ ಸೂಚಿಸಲಾಗಿದೆ ಎಂದು ತಿಳಿಸಿದರು. |
| | | • ಎಲ್.ಇ.ಡಿ ಬಲ್ಬ್ ವಿತರಣೆ ಸ್ಥಗಿತಗೊಳಿಸಿರುವ ಬಗ್ಗೆ. | • ಎಲ್.ಇ.ಡಿ ವಿತರಣೆಯನ್ನು ಕೇಂದ್ರ ಸರ್ಕಾರದ ಏಜೆನ್ಸಿಯನ್ನು ನಿಯೋಜಿಸಿದ್ದು ಪ್ರಸ್ತುತ ಮಡಿಕೇರಿಯಲ್ಲಿ ಒದಗಿಸುತ್ತಿರುವುದಾಗಿ ತಿಳಿಸಿದರು ಹಾಗೂ ತಿಂಗಳಲ್ಲಿ ಒಮ್ಮೆ ವಿವಿಧ ಉಪವಿಭಾಗದಲ್ಲಿ ಒದಗಿಸಲು ನಿಯೋಜಿಸಲು ಸಂಬಂಧಪಟ್ಟ ಏಜೆನ್ಸಿಗೆ ತಿಳಿಸಲಾಗುವುದೆಂದು ತಿಳಿಸಿದರು. |
| 2. | ಶ್ರೀಮತಿ ಚಿತ್ರಾ, ಪಂಜರಪೇಟೆ , ದೂ.ಸಂ 9972971267 | • ಸದರಿ ಗ್ರಾಹಕರ ಸರ್ವೆ ನಂ.21/2 ಪಂಜರಪೇಟೆ ಯಲ್ಲಿನ ತಮ್ಮ ನಿವೇಶನದ ಬಳಿ ಪರಿವರ್ತಕವನ್ನು ಅಳವಡಿಸಿದ್ದು ಮನೆ ಕಟ್ಟಲು ತೊಂದರೆಯಾಗಿರುವುದರಿಂದ ಪರಿವರ್ತಕವನ್ನು ಸ್ಥಳಾಂತರಿಸಲು ಲಿಖಿತ ರೀತಿಯಲ್ಲಿ ನೀಡಿರುತ್ತಾರೆ. | • ಇದಕ್ಕೆ ಉತ್ತರಿಸಿದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ರವರು ಮಾತನಾಡುತ್ತ ಸದರಿ ಪರಿವರ್ತಕವನ್ನು ಐ.ಪಿ.ಡಿ.ಎಸ್ ಯೋಜನೆಯಡಿ ಲೋಡ್ ಸೆಂಟರ್‌ಗೆ ಸ್ಥಳಾಂತರಿಸಲು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. |

| | | | |
|---|---|---|---|
| 3 | ಶ್ರೀ.ಕೆ.ಪಟ್ಟು ಪೋಲಯ್ಯ<br>ದೂ.ಸಂ.9448217490 | * ಬಿಟ್ಟಂಗಾಲದಲ್ಲಿರುವ ತಮ್ಮ ಲೇಔಟ್ ನ ವಿದ್ಯುದ್ದೀಕರಣಕ್ಕೆ ಸಂಬಂಧಿಸಿದಂತೆ ಸದರಿ ಲೇಔಟ್ ನಲ್ಲಿ ಗ್ರಾಹಕರೊಬ್ಬರು ನಿವೇಶನ ಕಾಮಗಾರಿಯನ್ನು ಕೈಗೆತ್ತಿಕೊಂಡಿದ್ದು ಸದರಿ ನಿವೇಶನಕ್ಕೆ ತಾತ್ಕಾಲಿಕ ವಿದ್ಯುತ್ ಸಂಪರ್ಕ ಒದಗಿಸುವಂತೆ.<br><br>* ಸದರಿ ಗ್ರಾಹಕರಿಗೆ ಸಂಬಂಧಿಸಿದ ಅಕ್ಕಿ ಗಿರಣಿಯಲ್ಲಿ ಹಲವು ವರ್ಷಗಳ ಹಿಂದೆ ಅಳವಡಿಸಿದ ಪರೀಕ್ಷಾ ಮಾಪಕವನ್ನು ಕಳಚುವಂತೆ. | * ಇದಕ್ಕೆ ಉತ್ತರಿಸಿದ ಕಾರ್ಯನಿರ್ವಾಹಕ ಅಭಿಯಂತರರು(ವಿ) ರವರು ಮಾತನಾಡುತ್ತ ಲೇಔಟ್ ನಿವೇಶನಕ್ಕೆ ನಿಗಮದ ಬಡಾವಣೆ ವಿದ್ಯುದ್ದೀಕರಣ ನಿಯಮದಂತೆ ಅರ್ಜಿಯನ್ನು ನೋಂದಾಯಿಸಲು ಸೂಚಿಸಿ ಸದರಿ ಬಡಾವಣೆಯಲ್ಲಿ ತಾತ್ಕಾಲಿಕ ವಿದ್ಯುತ್ ಸಂಪರ್ಕ ನೀಡಲಾಗುವುದೆಂದು ತಿಳಿಸಿದರು.<br><br>* ಇದಕ್ಕೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ರವರು ಮಾತನಾಡುತ್ತ ಸದರಿ ಮಾಪಕದ ವಿಚಾರವಾಗಿ ಮಾಪಕ ರೇಟಿಂಗ್ ವಿಭಾಗಕ್ಕೆ ತಿಳಿಸಿ ತದನಂತರದಲ್ಲಿ ಮಾಪಕವನ್ನು ಕಳಚುವುದಾಗಿ ತಿಳಿಸಿದರು. |
| 4 | ಶ್ರೀ.ಅಡೇಂಗಡ ಎನ್.ಅಶೋಕ ಹಾಗೂ ಚೆಟ್ರುಮಾಡ ಗಣೇಶ್, ಗೋಣಿಕೊಪ್ಪ<br>ದೂ.9448448626,<br>9480362239 | * ಗೋಣಿಕೊಪ್ಪ ಉಪವಿಭಾಗಕ್ಕೆ ಒಳಪಡುವ ಬಾಳೆಲೆ ಶಾಖಾ ವ್ಯಾಪ್ತಿಯ ಬಾಳೆಲೆ ಮಾರ್ಗದ ಕೇಬಲ್ ಕಾಮಗಾರಿಯ ಬಗ್ಗೆ.<br><br>* ಬೇಗೂರು-ಕೊಟ್ಟಗೇರಿಯ ಮರು ಮಾರ್ಗ ಬದಲಾವಣೆಯು ಮೂರು ವರ್ಷದ ಹಿಂದೆ ಪ್ರಸ್ತಾಪಿಸಿದ್ದು ಕಾಮಗಾರಿಯನ್ನು ಕೈಗೆತ್ತಿಕೊಳ್ಳದ ಬಗ್ಗೆ.<br><br>* ಎಲ್.ಟಿ-4ಎ ಜಕಾತಿಯಡಿಯ 15.ಅ.ಶ ಒಳಗಿನ ಸ್ಥಾವರಗಳಿಗೆ ಮಾಸಿಕ ಬಿಲ್ ಪಾವತಿಸಲು ಅನುಕೂಲವಾಗುವಂತೆ ಬಿಲ್‌ನಲ್ಲಿನ ಬಾಕಿ ಮೊತ್ತಕ್ಕೆ ಹಾಕಿರುವ ಬಡ್ಡಿಯನ್ನು ಹಿಂಪಡೆಯುವಂತೆ ಹಾಗೂ ಕಾಫಿಯು ಕೃಷಿ ಬೆಳೆಯಾಗಿದ್ದು ಸದರಿ ಬೆಳೆಯನ್ನು ಪಾನೀಯವೆಂದು ಪರಿಗಣಿಸದೇ 10.00 ಅ.ಶ ಯೊಳಗೆ ವಿದ್ಯುತ್ ಭಾರ ಹೊಂದಿರುವ ಎಲ್ಲಾ ಕೃಷಿ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ನೀಡುವಂತೆ ಕೋರಿದರು. | * ಇದಕ್ಕೆ ಉತ್ತರಿಸಿದ ಕಾರ್ಯನಿರ್ವಾಹಕ ಅಭಿಯಂತರರು(ವಿ) ರವರು ಮಾತನಾಡುತ್ತ ಸದರಿ ಮಾರ್ಗಕ್ಕೆ ವಿದ್ಯುತ್ ವಿತರಣಾ ಕೇಂದ್ರದಲ್ಲಿ ಬ್ರೇಕರ್ ಬೇಕಾಗಿದ್ದು ಕೂಡಲೇ ಒದಗಿಸಿ ಕಾಮಗಾರಿಯನ್ನು ಪೂರ್ಣಗೊಳಿಸುವುದಾಗಿ ತಿಳಿಸಿದರು.<br><br>* ಇದಕ್ಕೆ ಉತ್ತರಿಸಿದ ಕಾರ್ಯನಿರ್ವಾಹಕ ಅಭಿಯಂತರರು(ವಿ) ರವರು ಮಾತನಾಡುತ್ತ ಸದರಿ ಕಾಮಗಾರಿಯು ಗೋಣಿಕೊಪ್ಪ ಉಪವಿಭಾಗದ ಬಾಳೆಲೆ ಶಾಖಾಧಿಕಾರಿಗೆ ಸಂಬಂಧಿಸಿದ್ದು ಶಾಖಾಧಿಕಾರಿಗಳಿಗೆ ಪರಿಶೀಲಿಸುವಂತೆ ದೂರವಾಣಿ ಮುಖಾಂತರ ತಿಳಿಸಿದರು.<br>* ಇದಕ್ಕೆ ಉತ್ತರಿಸಿದ ಕಾರ್ಯನಿರ್ವಾಹಕ ಅಭಿಯಂತರರು(ವಿ) ರವರು ಮಾತನಾಡುತ್ತ ವಿದ್ಯುತ್ ದರ ನಿಗದಿಪಡಿಸುವುದು ನಿಗಮದ ವ್ಯಾಪ್ತಿಗೆ ಬರುವುದಿಲ್ಲ ಹಾಗು ಸದರಿ ವಿಷಯದ ಬಗ್ಗೆ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಗಮನಕ್ಕೆ ತರುವಂತೆ ಸಂಬಂಧಪಟ್ಟ ಗ್ರಾಹಕರಿಗೆ ತಿಳಿಸಿದರು. ತಮ್ಮ ಬೇಡಿಕೆಯನ್ನು ನಿಗಮದ ಮೇಲಧಿಕಾರಿಗಳ ಅವಗಾಹನೆಗೆ ತರುವುದಾಗಿಯೂ ತಿಳಿಸಿದರು. |
| 5 | ಶ್ರೀ.ಶಂಕರಪ್ಪ ಬೇಟೋಳಿ<br>ದೂ.9449790189 | * ಸದರಿ ಗ್ರಾಹಕರು ಇತ್ತೀಚೆಗೆ ಒದಗಿಸಿರುವ ಸಂಪರ್ಕದ ಮಾರ್ಗವು ತೀವ್ರ ಕೆಳಮಟ್ಟದಲ್ಲಿದ್ದು ಹಾಗೂ ಮರದ ರೆಂಬೆಕೊಂಬೆಗಳು ಮಾರ್ಗಕ್ಕೆ ತಗುಲುತ್ತಿರುವುದಾಗಿ ತಿಳಿಸಿದರು.<br><br>* ಮಳೆಗಾಲದ ಸಂದರ್ಭದಲ್ಲಿ ಗುಂಡಿಗೆರೆ-ಬೇಟೋಳಿ ಗ್ರಾಮದಲ್ಲಿ ಗದ್ದೆಗಳ ಮುಖಾಂತರ ಹಾದುಹೋಗಿರುವ ಮಾರ್ಗಗಳು ನೀರಿನಲ್ಲಿ ಮುಳುಗಡೆಯಾಗುತ್ತಿದ್ದು ಮಾರ್ಗ ಮರು ಬದಲಾವಣೆ ಮಾಡುವಂತೆ .<br><br>* ಟಿ.ಸಿ.ಎಸ್ ಕಾಮಗಾರಿಯಲ್ಲಿ ಕಂಬವನ್ನು ಅಳವಡಿಸಿದ್ದು ಕಾಮಗಾರಿಯನ್ನು ಪೂರ್ಣಗೊಳಿಸದೇ ಇರುವ ಬಗ್ಗೆ. | * ಇದಕ್ಕೆ ಉತ್ತರಿಸಿದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ರವರು ಮಾತನಾಡುತ್ತ ಸದರಿ ಮಾರ್ಗದ ಕ್ಷೇತ್ರ ಪರಿಶೀಲಿಸುವಂತೆ ಸೂಚಿಸಿದರು.<br><br>* ಇದಕ್ಕೆ ಉತ್ತರಿಸಿದ ಕಾರ್ಯನಿರ್ವಾಹಕ ಅಭಿಯಂತರರು(ವಿ) ರವರು ಮಾತನಾಡುತ್ತ ಸದರಿ ಮಾರ್ಗವನ್ನು ಪರಿಶೀಲಿಸಿ ಸೂಕ್ತ ಕಾರಿಡಾರ್ ಒದಗಿದಲ್ಲಿ ಕಾಮಗಾರಿಗೆ ಅಂದಾಜು ಪಟ್ಟಿ ಸಲ್ಲಿಸುವಂತೆ ಸೂಚಿಸಿದರು.<br><br>* ಇದಕ್ಕೆ ಉತ್ತರಿಸಿದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ರವರು ಮಾತನಾಡುತ್ತ ಟಿ.ಸಿ.ಎಸ್ ಅಳವಡಿಸುವ ಕಾಮಗಾರಿಗೆ ಏಜೆನ್ಸಿ ನಿಯೋಜಿಸಿದ್ದು ಸದರಿ ಏಜೆನ್ಸಿಯವರಿಂದ ವಿಳಂಬವಾಗುತ್ತಿರುವುದಾಗಿ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ) ರವರ ಗಮನಕ್ಕೆ ತಂದರು. |

| | | | |
|---|---|---|---|
| 6 | ಶ್ರೀ.ಟಿ.ಡಿ.ಆನಂದ, ಕೆದಮುಳ್ಳೂರು ದೂ.8123851557 | • ಸದರಿಯವರು ನೂತನವಾಗಿ ಮನೆ ನಿರ್ಮಾಣಗೊಂಡಿರುವ ಮನೆಗೆ ಸೌಭಾಗ್ಯ ಯೋಜನೆಯಡಿ ಅರ್ಜಿ ಸಲ್ಲಿಸಿದ್ದು ಇದುವರೆಗೂ ಸಂಪರ್ಕ ನೀಡದ ಬಗ್ಗೆ. | • ಇದಕ್ಕೆ ಉತ್ತರಿಸಿದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ರವರು ಮಾತನಾಡುತ್ತ ಸದರಿ ಯೋಜನೆಯ ಕಾಮಗಾರಿಯು ಪ್ರಗತಿಯಲ್ಲಿದ್ದು ಶೀಘ್ರದಲ್ಲಿ ಸಂಪರ್ಕ ನೀಡಲಾಗುವುದಾಗಿ ತಿಳಿಸಿದರು. |
| 7 | ಶ್ರೀ.ಸಂಬಪ್ಪ ಬೆಳ್ಳುಮಾಡು ದೂ.9483308333 | • ಕಳೆದ ಜನಸಂಪರ್ಕ ಸಭೆಯಲ್ಲಿ ತಾವುಗಳು ಬೆಳ್ಳುಮಾಡು ಗ್ರಾಮಕ್ಕೆ ಸದರಿ 11 ಕೆ.ವಿ ಚೇರಿ ಮಾರ್ಗದಿಂದ ಲಿಂಕ್ ಲೈನ್ ಕಲ್ಪಿಸಲು ಗ್ರಾಮಸ್ಥರ ಪರವಾಗಿ ಅರ್ಜಿ ಸಲ್ಲಿಸಿದ್ದು ಸದರಿ ಕಾಮಗಾರಿ ಬಗ್ಗೆ. | • ಇದಕ್ಕೆ ಉತ್ತರಿಸಿದ ಕಾರ್ಯನಿರ್ವಾಹಕ ಅಭಿಯಂತರರು(ವಿ) ರವರು ಮಾತನಾಡುತ್ತ ಸದರಿ ಕಾಮಗಾರಿಕೆ ಸಂಬಂಧಿಸಿದಂತೆ ಈಗಾಗಲೇ ಸ್ಥಳ ಪರಿಶೀಲಿಸಲಾಗಿದ್ದು ಕೂಡಲೇ ಪ್ರಸ್ತಾವನೆ ಸಲ್ಲಿಸಲಾಗುವುದಾಗಿ ತಿಳಿಸಿದರು. |
| 8 | ಶ್ರೀ.ಪಾರ್ಥ ಚಂಗಪ್ಪ, ವಿರಾಜಪೇಟೆ ದೂ. | • ತಮ್ಮ ಮಾವನವರ ಶ್ರೀ.ಪಿ.ಎಸ್.ಪೊನ್ನಪ್ಪ ರವರಿಗೆ ಸೇರಿದ ಸ್ಥಾವರ ಸಂಖ್ಯೆ:**CDAEH11** ಸ್ಥಾವರವನ್ನು ಖಾಯಂ ನಿಲುಗಡೆಗೊಳಿಸಲು **2016** ರಂದೇ ಅರ್ಜಿ ಸಲ್ಲಿಸಿದ್ದು 2 ವರ್ಷದ ಬಳಿಕವೂ ಖಾಯಂ ನಿಲುಗಡೆಯಾಗದೆ ಪ್ರಸಕ್ತ ಮಾಹೆಯಲ್ಲಿ ಮಾಸಿಕ ವಿದ್ಯುತ್ ಬಿಲ್ ಒದಗಿಸಿರುವ ಬಗ್ಗೆ ವಿಷಾದ ವ್ಯಕ್ತಪಡಿಸುತ್ತಾ ಸಂಬಂಧಿಸ ನೌಕರರ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. | • ಇದಕ್ಕೆ ಉತ್ತರಿಸಿದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ರವರು ಮಾತನಾಡುತ್ತ ಸದರಿ ವಿಷಯದ ಬಗ್ಗೆ ತೀವ್ರ ವಿಷಾದ ವ್ಯಕ್ತಪಡಿಸುತ್ತಾ ಹಿರಿಯ ಸಹಾಯಕರಿಗೆ ಸ್ಥಳದಲ್ಲಿಯೇ ಸಭೆಗೆ ಕರೆಸಿ ಸಂಬಂಧಪಟ್ಟ ಗ್ರಾಹಕರ ಅರ್ಜಿಯನ್ನು ಪರಿಗಣಿಸಿ ಖಾಯಂ ನಿಲುಗಡೆಗೊಳಿಸಲು ನಿಗಮದ ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. |
| 9 | ಶ್ರೀ.ಪಿ.ಕೆ.ಪೊನ್ನಪ್ಪ, ಬೆಳ್ಳಾರಿಮಾಡು, ದೂ.9535468102 | • ಸದರಿ ಗ್ರಾಹಕರಿಗೆ ಸಂಬಂಧಿಸಿದ ನೀರಾವರಿ ಐಪಿ ಸ್ಥಾವರ ಸಂಖ್ಯೆ **GKVIP3897** ಗೋಣಿಕೊಪ್ಪ ಉಪವಿಭಾಗದಲ್ಲಿ ಸಂಪರ್ಕ ಪಡೆದಿದ್ದು ಸದರಿ ಸ್ಥಾವರಕ್ಕೆ ಇಲ್ಲಿಯವರೆಗೆ ಯಾವುದೇ ರೀತಿಯ ಮಾಸಿಕ ಬಿಲ್ ಒದಗದೇ ಇದ್ದು ಕಛೇರಿಯಲ್ಲಿ ವಿಚಾರಿಸಿದಾಗ ಆ ಸ್ಥಾವರ ಸಂಖ್ಯೆಗೆ ಸಂಬಂಧಿಸಿದ ಯಾವುದೇ ರೀತಿಯ ದಾಖಲಾತಿಗಳು ಇಲ್ಲದಿರುವುದಾಗಿ ತಿಳಿಸಿರುವ ಬಗ್ಗೆ. | • ಇದಕ್ಕೆ ಉತ್ತರಿಸಿದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ರವರು ಮಾತನಾಡುತ್ತ ಸದರಿ ಸ್ಥಾವರಕ್ಕೆ ಸಂಬಂಧಿಸಿದಂತೆ ದಾಖಲಾತಿಯನ್ನು ಪರಿಶೀಲಿಸಿ ಮಾಸಿಕ ಬಿಲ್ಲನ್ನು ಒದಗಿಸುವುದಾಗಿ ತಿಳಿಸಿದರು. |
| | | • ತಮಗೆ ಸಂಬಂಧಿಸಿದ ಸ್ಥಾವರ ಸಂಖ್ಯೆ43857 ಹಾಗೂ ಕೆ.ಎಲ್-24190 ಸ್ಥಾವರಕ್ಕೆ ಸಮಯಕ್ಕೆ ಸರಿಯಾಗಿ ಬಿಲ್ ಕೊಡದೆ ತಡವಾಗಿ ಕೊಡುತ್ತಿರುವ ಬಗ್ಗೆ. | • ಸಂಬಂಧಿಸಿದ ಬಿಲ್ ನೀಡುವವರ ಗಮನಕ್ಕೆ ತಂದು ಯಾವುದೇ ರೀತಿಯ ವಿಳಂಬ ಅಥವಾ ಗ್ರಾಹಕರಿಗೆ ತೊಂದರೆಯಾಗದಂತೆ ನೋಡಿಕೊಳ್ಳುವುದಾಗಿ ಸೂಚಿಸಿದರು. |
| 10 | ಕುಮಾರಿ.ರಚನಾ, ಕೊಡುಗದ್ದೆ, ಸಿದ್ದಾಪುರ ದೂ:9686948612 | • ತಮ್ಮ ಸ್ಥಾವರ ಸಂಖ್ಯೆ**GYL12818** ಅಧಿಕ ಮೊತ್ತದ ಬಿಲ್ ನೀಡಿರುವುದಾಗಿ ಲಿಖಿತ ದೂರು. | • ಇದಕ್ಕೆ ಉತ್ತರಿಸಿದ ಕಿರಿಯ ಅಭಿಯಂತರರು(ವಿ), ಸಿದ್ದಾಪುರ ರವರು ಮಾತನಾಡುತ್ತ ಸದರಿ ಸ್ಥಾವರಕ್ಕೆ ಮಾಪಕ ಓದುಗರು ಹಲವು ತಿಂಗಳಿನಿಂದ ಅಂದಾಜು ಗಣಾಂಕ ನೀಡುತ್ತಿದ್ದು ತಾವು ಖುದ್ದಾಗಿ ಸ್ಥಳ ಪರಿಶೀಲಿಸಿದ್ದು, ಸ್ಥಳ ಪರಿಶೀಲನಾ ಸಂದರ್ಭದಲ್ಲಿ ಮಾಪಕದಲ್ಲಿ ಲಭ್ಯವಿದ್ದ ಗಣಾಂಕವನ್ನು ಅಂದಾಜು ತಾಳೆಗೆ ನೀಡಿರುವುದರಿಂದ ಅಧಿಕ ಬಂದಿರುವುದಾಗಿ ಬಿಲ್ಲನ್ನು ಒದಗಿಸುವುದಾಗಿ ತಿಳಿಸಿದರು. |

ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಚಾ.ವಿ.ಸ.ನಿ.ನಿ, ಕಾ ಮತ್ತು ಪಾ ವಿಭಾಗ,
ಮಡಿಕೇರಿ

ಪ್ರತಿಯನ್ನು:

1. ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ., ವಲಯ ಕಛೇರಿ, ಮೈಸೂರು ರವರಿಗೆ ಸಲ್ಲಿಸಲಾಗಿದೆ.
2. ಪ್ರಧಾನ ವ್ಯವಸ್ಥಾಪಕರು (ವಾಣಿಜ್ಯ), ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
3. ವ್ಯವಸ್ಥಾಪಕ ನಿರ್ದೇಶಕರ ಕಾರ್ಯನಿರ್ವಾಹಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
4. ನಿರ್ದೇಶಕರು(ತಾಂತ್ರಿಕ) ರವರ ತಾಂತ್ರಿಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
5. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾ.ವಿ.ಸ.ನಿ.ನಿ., ಪಿರಿಯಾಪಟ್ಟಣ ಉಪವಿಭಾಗ ರವರ ಮಾಹಿತಿಗಾಗಿ.
6. ಹಿಆಸ/ಪ್ರತಿ/ಕಡತ.